ಸಾಕ್ಷಿಯನ್ನು ದಿಃ 1-2-2020 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರಃ ಶ್ರೀ ಎಸ್ ಕೆ ಪಿ ವಕೀಲರಿಂದಃ**

ಈ ದಿನ ನಾನು ವಾದಿ ಪರವಾಗಿ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿದ್ದು ನನ್ನ ಮುಖ್ಯ ವಿಚಾರಣೆಗೆ ಸಂಬಂಧಿಸಿ ಪ್ರಮಾಣ ಪತ್ರವನ್ನು ಹಾಜರ ಪಡಿಸಿದ್ದು, ಅದರಲ್ಲಿ ನಮೂದಿಸಿರುವ ಮಜಕೂರುಗಳು ಸತ್ಯವಾಗಿದ್ದು, ಅದಕ್ಕೆ ನನ್ನ ಸಹಿ ಇದೆ.

**ಪಾಟಿ ಸವಾಲುಃ 1 ರಿಂದ 4, 9, 11 ಎ, 11 ಬಿ ಮತ್ತು 13 ನೇ ಪ್ರತಿವಾದಿಗಳ ಪರವಾಗಿಃ ಶ್ರೀ ಎಸ್ ವಾಯ್ ಎಸ್ ವಕೀಲರಿಂದಃ**

ಸರ್ವೆ ನಂ. 231/ಎ1ರ 3 ಗುಂಟೆ ಜಮೀನನ್ನು ನಾನು ಕ್ರಯಪತ್ರದ ಮೂಲಕ ಖರೀದಿಸಿರುತ್ತೇನೆ. ಸದರಿ ಕ್ರಯ ಪತ್ರದಲ್ಲಿ ನಾನು ಖರೀದಿಸಿದ ಜಮೀನಿನ ಚೆಕ್ಕುಬಂದಿಗಳನ್ನು ಮತ್ತು ಗಡಿಗಳನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಖರೀದಿಸಿರುವ 3 ಗುಂಟೆ ಜಮೀನನ್ನು ಪ್ರತ್ಯೇಕವಾಗಿ ಹಿಸ್ಸೆ ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಖರೀದಿಸಿರುವ 3 ಗುಂಟೆ ಜಮೀನಿನಲ್ಲಿ ಮನೆಯನ್ನು ಕಟ್ಟಿಸಿರುತ್ತೇನೆ ಎಂದರೆ ನಿಜ. ವಾದಿಯು ಸರ್ವೆನಂ. 231/ಎ ಇದರ 16 ಗುಂಟೆ ಜಮೀನಿನ ಮಾಲೀಕರು ಎಂದು ನಾನು ಪಹಣಿ ಪತ್ರಿಕೆ ಆಧಾರದ ಮೇಲೆ ಹೇಳುತ್ತೀದ್ದೇನೆ. ವಾದಿಯು ಸ್ವದ್ರಿ ಜಮೀನನ್ನು ಅನಂತ ಕೃಷ್ಣಪ್ಪ ಶೇಟರವರಿಂದ ಖರೀದಿಸಿರುತ್ತಾರೆ. ಸದರಿ ಕ್ರಯ ಪತ್ರದಲ್ಲಿ ವಾದಿಯು ಖರೀದಿಸಿರುವ ಜಮೀನಿನ ಚೆಕ್ಕುಬಂದಿಗಳನ್ನು ಮತ್ತು ಗಡಿಗಳನ್ನು ನಮೂದಿಸಿರುತ್ತಾರೆ ಎಂದರೆ ನಿಜ.

ವಾದಿಯು ಸರ್ವೆ ನಂ. 231/ಎ ಇದರ 16 ಗುಂಟೆ ಜಮೀನಿಗಾಗಿ ಕಾರವಾರದ ಮುನ್ಸಿಫ್ ನ್ಯಾಯಾಲಯದಲ್ಲಿ ಓ ಎಸ್ ನಂ. 35/1972 ಎಂಬ ದಾವೆಯನ್ನು ಹೂಡಿದ ವಿಚಾರ ನನಗೆ ಗೊತ್ತಿದೆ. ವಾದಿಯು ಸದರಿ ದಾವೆಯನ್ನು ತಾನು ಖರೀದಿಸಿದ ಜಮೀನಿನ ಗಡಿಗಳನ್ನು ಗುರುತಿಸುವ ಸಲುವಾಗಿ ಪರಿಹಾರ ಕೇಳಿ ಸಲ್ಲಿಸಿದ್ದರು. ವಾದಿಯು ಖರೀದಿಸಿದ ಜಮೀನಿನ ಪೈಕಿ ಅದರ ಅಕ್ಕಪಕ್ಕದವರು 6 ಗುಂಟೆ 8 ಆಣೆ ಜಮೀನನ್ನು ಒತ್ತುವರಿ ಮಾಡಿದ್ದ ಕಾರಣ ವಾದಿಯು ಓ ಎಸ್ ನಂ. 35/1972 ರ ದಾವೆಯನ್ನು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ವಜಾ ಆಗಿರುತ್ತದೆ. ವಾದಿಯು ಸಲ್ಲಿಸಿದ್ದ ಆರ್ ಎ ನಂ. 57/1989 ವಜಾ ಆಗಿದೆ ಎಂದರೆ ಸಾಕ್ಷಿಯು ವಾದಿಗೆ ಕಣ್ಣು ಕಾಣುತ್ತಿರಲಿಲ್ಲ ಮತು ಕಿವಿ ಕೇಳಿಸುತ್ತಿರಲಿಲ್ಲ, ಆದಕಾರಣ ವಜಾ ಆಗಿದೆ ಎಂದು ನುಡಿದಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ಬೇರೆ ಬೇರೆ ಹಿಸ್ಸೆದಾರರು ಎಂದರೆ ಸರಿಯಲ್ಲ.

ಮೋಹನ ಭಿಕಾರೋ ನಾಯ್ಕ ಎಂಬುವವರು ಸರ್ವೆ ಇಲಾಖೆಯಲ್ಲಿ ದ್ವಿತೀಯ ದರ್ಜೆಯ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ಮೋಹನ ಭಿಕಾರೋ ನಾಯ್ಕರವರಿಗೆ ಕಂದಾಯ ದಾಖಲಾತಿಗಳನ್ನು ಸೃಷ್ಟಿ ಮಾಡಲು ಅಧಿಕಾರವಿಲ್ಲ ಎಂದರೆ ಸರಿಯಲ್ಲ. ಕಂದಾಯ ಇಲಾಖೆಯಲ್ಲಿ ದ್ವಿತೀಯ ದರ್ಜೆಯ ಸಹಾಯಕರ ಮೇಲಾಧಿಕಾರಿಗಳು ಇರುತ್ತಾರೆ ಎಂದರೆ ನಿಜ. ಮೇಲಾಧಿಕಾರಿಗಳ ಸಹಿ ಇಲ್ಲದೇ ಯಾವುದೇ ದಾಖಲಾತಿಗಳು ಸಿಂಧು ಆಗುವುದಿಲ್ಲ ಎಂದರೆ ನಿಜ. ಮೋಹನ ಭಿಕಾರೋ ನಾಯ್ಕರವರು ಕಂದಾಯ ದಾಖಲಾತಿಗಳನ್ನು ಸೃಷ್ಟಿಸಿದ್ದಾರೆ ಎಂದು ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ.

ಈಗ ವಾದಿಯು 8 ಗುಂಟೆ 12 ಆಣೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ನಿಜ. ಈಗ ವಾದಿಗೆ ಯಾವುದೇ ಜಮೀನು ಉಳಿದಿಲ್ಲ ಎಂದರೆ ಸರಿಯಲ್ಲ. ಆದರೆ ವಾದಿಗೆ 7 ಗುಂಟೆ 4 ಆಣೆ ಜಮೀನು ಇರುತ್ತದೆ. ವಾದಿಗೆ ಸಹಾಯ ಮಾಡಲು ನಾನುಸುಳ್ಳು ಸಾಕ್ಷಿ ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ವಾದಿಯ ದಾರಿಗೆ ಸಂಬಂಧಪಟ್ಟಂತೆ ಪ್ರತಿವಾದಿಗಳು ಯಾವುದೇ ಅಡೆತಡೆಗಳನ್ನು ಉಂಟು ಮಾಡಿಲ್ಲ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ 5 ರಿಂದ 8, 10 ಮತ್ತು 12 ನೇ ಪ್ರತಿವಾದಿಗಳಿಂದಃ</u>**

ಸದರಿ ಪ್ರತಿವಾದಿಗಳ ವಿರುದ್ಧ ದಾವೆ ವಜಾಗೊಂಡಿರುತ್ತದೆ.

ಮರು ವಿಚಾರಣೆ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.